C.R.P.67

Form No.4 (Criminal)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

Spl.C. No.2/2024 ಪಿ.ಡಬ್ಲ್ಯೂ-5 ಸಿ.ಡಬ್ಲ್ಯೂ-10

ದಿನಾಂಕಃ- 28.01.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಬಿ. ಶಿವಣ್ಣ |
| ತಂದೆಯ ಹೆಸರು | ಹುಚ್ಚಪ್ಪ |
| ವಯಸ್ಸು | 61 ವರ್ಷ |
| ಉದ್ಯೋಗ | ನಿವೃತ್ತ ಅಬಕಾರಿ ಉಪ ನಿರೀಕ್ಷಕರು, |
| ವಾಸ | ಮದ್ದೂರು |

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನಾನು 01.06.2023 ರಿಂದ 31.01.2024 ರವರೆಗೆ ಪಾಂಡವಪುರ ಉಪ ವಿಭಾಗದ ಹೆಚ್ಚುವರಿ ಅಬಕಾರಿ ನಿರೀಕ್ಷಕರಾಗಿ ಕೆಲಸ ಮಾಡಿದ್ದೇನೆ.

2. ನಾನು 05.06.2023 ರಂದು ಈ ಪ್ರಕರಣದ ಕಡತವನ್ನು ಚಾಸಾ-9 ನೇ ಬಿ.ಸಿ.ರಮೇಶ ಪಾಂಡವಪುರ ಉಪ ವಿಭಾಗದ ಅಬಕಾರಿ ನಿರೀಕ್ಷಕರಿಂದ ಪಡೆದಿದ್ದೇನೆ.

3. ನಾನು 13.06.2023 ರಂದು 20 ಗ್ರಾಂ ಗಾಂಜಾ ಇದ್ದ ಬಟ್ಟೆಯ ಗಂಟನ್ನು ರಾಸಾಯನಿಕ ಪರೀಕ್ಷೆಗಾಗಿ ಬೆಂಗಳೂರು ಶಾಂತಿನಗರದಲ್ಲಿ ಇರುವ ರಾಸಾಯನಿಕ ಪರೀಕ್ಷಾ ಕೇಂದ್ರಕ್ಕೆ ಕಳುಹಿಸಿದ್ದೇನೆ.

4. ನಾನು 20.06.2023 ರಂದು ಪಾಲಹಳ್ಳಿ ಗ್ರಾಮದ ಸ.ನಂ. 273/1 ನೇ ಜಮೀನಿನ ಮಾಲೀಕರ ಕುರಿತು ಮಾಹಿತಿ ಕಳುಹಿಸುವಂತೆ ಶ್ರೀರಂಗಪಟ್ಟಣ ತಾಲ್ಲೂಕು ತಹಶೀಲ್ದಾರ್ ರವರಿಗೆ ವಿನಂತಿ ಪತ್ರ ಕಳುಹಿಸಿದ್ದೇನೆ.

5. ನಾನು 11.07.2023 ರಂದು ಮಹಜರು ಸಾಕ್ಷಿದಾರರಾದ ಗಿರೀಶ, ಮಧುಸೂದನ, ಪಾಲಹಳ್ಳಿ ವೃತ್ತದ ಕಂದಾಯ ಸಹಾಯಕರಾದ ಬೆಟ್ಟಯ್ಯ, ನಮ್ಮ ಕಛೇರಿಯ ಪೇದೆಯಾದ ಯೋಗೇಶ ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೇನೆ.

6. ನನ್ನ ಸಮಕ್ಷಮ ಗಿರೀಶ ಬಿನ್ ಶಿವಣ್ಣ ಮತ್ತು ಮಧುಸೂದನ ಬಿನ್ ಲಕ್ಷ್ಮಣ ಕ್ರಮವಾಗಿ ನಿಪಿ.20 ಮತ್ತು 21 ರಲ್ಲಿ ಗುರುತಿಸಿರುವ ದಾಖಲೆಗಳಲ್ಲಿ ಬರೆದಿರುವಂತೆ ಹೇಳಿಕೆ ಕೊಟ್ಟಿದ್ದಾರೆ.

7. 24.08.2023 ರಂದು ಬೆಂಗಳೂರು ರಾಸಾಯನಿಕ ಪರೀಕ್ಷಾ ಕೇಂದ್ರ ದವರು ಕಳುಹಿಸಿದ ವರದಿಯನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿದ ವಸ್ತುವಿನ ಪಡೆದಿದ್ದೇನೆ. ಈ ಸಾಕ್ಷಿ ನ್ಯಾಯಾಲಯದಲ್ಲಿ ಹಾಜರು ಪಡಿಸಿರುವ ಸೀಲಾಗಿರುವ ಬಿಳಿಯ ಬಟ್ಟೆಯ ಗಂಟನ್ನು ರಾಸಾಯನಿಕ ಪರೀಕ್ಷಾ ವರದಿಯ ಜೊತೆಯಲ್ಲಿ ಪಡೆದಿರುವುದಾಗಿ ಗುರುತಿಸಿದ್ದಾರೆ. ಸದರಿ ಗಂಟನ್ನು ಎಂಒ-1 ಎಂದು ಗುರುತಿಸಲಾಯಿತು.

8. ದಿಃ 16.11.2023 ರಂದು ಶ್ರೀರಂಗಪಟ್ಟಣ ತಹಶೀಲ್ದಾರ್ ರವರು ಕಳುಹಿಸಿದ ಪತ್ರ ಮತ್ತು ಪಾಲಹಳ್ಳಿ ಗ್ರಾಮದ 273/1 ನೇ ಜಮೀನಿನ 2023-24 ನೇ ಸಾಲಿನ RTC ಯನ್ನು ಪಡೆದಿದ್ದೇನೆ. ಸ.ನಂ. 273/1 ನೇ ಜಮೀನಿನ 2023-24 ನೇ ಪಹಣಿಯಲ್ಲಿ ಆರೋಪಿತರ ಹೆಸರನ್ನು ಮಾಲೀಕರು ಎಂದು ಬರೆದಿದೆ.

9. ನಾನು 07.12.2023 ರಂದು ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿದ್ದೇನೆ.

10. ಈ ಸಾಕ್ಷಿ ಕಡತದಲ್ಲಿ ಇರುವ

1. 13.06.2023 ರಂದು ಬೆಂಗಳೂರು ಕೇಂದ್ರ ರಾಸಾಯನಿಕ ಪರೀಕ್ಷಾ ಪ್ರಯೋಗ ಶಾಲೆಗೆ ಕಳುಹಿಸಿದ ಪತ್ರ,

2. 20.06.2023 ರಂದು ಶ್ರೀರಂಗಪಟ್ಟಣ ತಹಶೀಲ್ದಾರ್ ರವರಿಗೆ ಕಳುಹಿಸಿದ ಪತ್ರ,

3. 24.08.2023 ರಂದು ಬೆಂಗಳೂರು ಕೇಂದ್ರ ರಾಸಾಯನಿಕ ಪರೀಕ್ಷಾ ಪ್ರಯೋಗ ಶಾಲೆಯವರಿಂದ ಸ್ವೀಕರಿಸಿದ ವರದಿ,

4. 16.11.2023 ರಂದು ಶ್ರೀರಂಗಪಟ್ಟಣ ತಹಶೀಲ್ದಾರ್ ರವರಿಂದ ಪಡೆದಿರುವ ಪತ್ರ ಮತ್ತು ಜೊತೆಯಲ್ಲಿ ಇರುವ RTC ಮೇಲೆ ತನ್ನ ಸಹಿ ಇರುವುದನ್ನು ಗುರುತಿಸಿದ್ದಾರೆ.

11. ಈ ಸಾಕ್ಷಿಯ ಸಹಿ ಇರುವ ಮೇಲೆ ವಿವರಿಸಿದ ದಾಖಲೆಗಳನ್ನು ನಿಪಿ.22 ರಿಂದ ನಿಪಿ. 26 ರವರೆಗೆ ಗುರುತಿಸಲಾಯಿತು ಮತ್ತು ಈ ಸಾಕ್ಷಿಯ ಸಹಿಗಳನ್ನು ನಿಪಿ.22(ಎ), 23(ಎ), 24(ಎ) ಮತ್ತು 26(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ- ಆರೋಪಿತರ ಪರವಾಗಿ ಶ್ರೀ . ಸಿ ಮೂರ್ತಿ ವಕೀಲರಿಂದಃ-</u>

1. ನಿಪಿ.26 ರಲ್ಲಿ ಗುರುತಿಸಿರುವ 2023-24 ನೇ ಸಾಲಿನ ಪಾಲಹಳ್ಳಿ ಗ್ರಾಮದ ಸ.ನಂ. 273/1 ನೇ ಜಮೀನಿನ RTC ಯ 12/9 ನೇ ಕಾಲಂ ನಲ್ಲಿ ಖುಷ್ಕಿ ಜಮೀನು, ಭತ್ತ (ಹೈಬ್ರಿಡ್) ಎಂದು ಬರೆದಿದೆ ಎನ್ನುವುದು ನಿಜ.

2. ನನ್ನ ಸಮಕ್ಷಮ ಗಿರೀಶ ಬಿನ್ ಶಿವಣ್ಣ ಮತ್ತು ಮಧುಸೂದನ ಬಿನ್ ಲಕ್ಷ್ಮಣ ನಿಪಿ.20 ಮತ್ತು 21 ರಲ್ಲಿ ಗುರುತಿಸಿರುವ ದಾಖಲೆಗಳಲ್ಲಿ ಬರೆದಿರುವಂತೆ ಹೇಳಿಕೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

3. ನಾನು ಆರೋಪಿತರ ವಿರುದ್ಧ ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದೇನೆ ಮತ್ತು ಸುಳ್ಳು ಅಂತಿಮ ವರದಿ ಕಳುಹಿಸಿದ್ದೇನೆ ಎನ್ನುವುದು ಸರಿಯಲ್ಲ.

4. ನಾನು ಈಗ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ಇಲ್ಲ ಎಂದು ಹೇಳಿದ್ದಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಸುಬ್ರಮಣ್ಯ.ಜಿ. ಎನ್.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.